# ಹಾಡು ಬದಲಾವಣೆ ತಂದಾಗ ತೃಪ್ತಿ



**ನಾಗೇಂದ್ರ ಪ್ರಸಾದ್**

**1** ನನ್ನ ಪ್ರಕಾರ ಸಿದ್ಧತೆ ಸಿಂಪಲ್. ಆ ಹಾಡು ಬರೆಯಬೇಕಾದ ಸನ್ನಿವೇಶಕ್ಕೆ ನಮ್ಮ ಅನುಭವಕ್ಕೆ ದಕ್ಕಿದ್ದು ಏನಿದೆ, ಎಷ್ಟರ ಮಟ್ಟಿಗೆ ಕಲ್ಪನೆ ಮಾಡಬೇಕು, ಸಿನಿಮಾದ ಒಟ್ಟು ಡ್ರೈವ್ ಅಥವಾ ಜಾನರ್ ಯಾವ ರೀತಿ ಇದೆ ಅನ್ನೋದನ್ನ ಯೋಚನೆ ಮಾಡಿ ಅದಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಳ್ಳುವೆ. ನಾಯಕ ನಟ ಯಾರು, ಅವರು ಇದನ್ನು ಹಾಡಿದರೆ ಚೆನ್ನಾಗಿರುತ್ತೊ ಇಲ್ಲೊ ಎಂಬುದನ್ನೂ ಯೋಚಿಸುವೆ.

**2** ಮೊದಲು ಟ್ಯೂನ್ ಕೇಳಿಸಿಕೊಂಡು ಸಿನಿಮಾದ ಸನ್ನಿವೇಶಕ್ಕೆ ತಕ್ಕಂತೆ ಹಾಡು ಬರೆಯುತ್ತೇನೆ. ಆಮೇಲೆ ಟ್ಯೂನ್‌ಗೆ ತಕ್ಕಂತೆ ಹಾಡಿ ತಾಳೆ ಮಾಡುವೆ. ಟ್ಯೂನ್ ಹಾಗೂ ಸಾಹಿತ್ಯ ಹೊಂದುತ್ತಿದೆಯೇ ಅಂತ ಚೆಕ್ ಮಾಡುವೆ. ಅದರಿಂದ ಸಿಂಪಲ್ ಆಗಿ ಗೊತ್ತಾಗುತ್ತೆ.

**3** ಈ ವಿಚಾರವೇ ಬಹಳ ಕಷ್ಟಕರವಾದದ್ದು. ಹೆಚ್ಚು ತಿಣುಕಾಡಿ ಬರೆಯುವ ಅನಿವಾರ್ಯತೆ ಇರುತ್ತದೆ. ಈ ಹಿಂದೆ ಬಂದ ಹಾಡುಗಳಲ್ಲಿ ಯಾವ್ಯಾವುದನ್ನು ಖಾಲಿ ಬಿಟ್ಟಿದ್ದೇವೆ ಎಂಬುದನ್ನು ಯೋಚನೆ ಮಾಡುವುದು ಬಹು ಮುಖ್ಯ. ಉದಾಹರಣೆಗೆ, ಡುಯೆಟ್ ಸಾಂಗ್ ಎಂದರೆ ಹತ್ತಾರು ವರ್ಷಗಳಿಂದ ಸಾವಿರಾರು ಪ್ರೀತಿ ಹಾಡುಗಳು ಬಂದು ಹೋಗಿವೆ. ಅವುಗಳೆಲ್ಲವನ್ನೂ ಹೊರತುಪಡಿಸಿ ಈ ಪ್ರೀತಿಯನ್ನು ಹೊಸದಾಗಿ ಹೇಗೆ ಹೇಳುವುದು ಎಂಬುದನ್ನು ಯೋಚನೆ ಮಾಡಿ, ಆ ಪಾತ್ರಗಳು ಏನು, ಆ ಪಾತ್ರಗಳ ತೂಕವೇನು ಅನ್ನೋದನ್ನ ವಿಚಾರ ಮಾಡಿ ಬರೆಯಬೇಕಾಗುತ್ತದೆ. ಪಾತ್ರಧಾರಿ ವಿದ್ಯಾವಂತನೇ, ಅವಿದ್ಯಾವಂತನೇ, ಸಮಾಜದ ಯಾವ ವರ್ಗದಲ್ಲಿ ಇದ್ದಾನೆ ಎಂಬುದನ್ನೆಲ್ಲಾ ವಿಶ್ಲೇಷಣೆ ಮಾಡಬೇಕಾಗುತ್ತದೆ.